ಬಸ್ ಸ್ಟ್ಯಾಂಡಿಗೆ ಹೋಗಬೇಕಾಗಿದ್ದಿತು. ಲಾಲ್‌ಗೇರಿ ಕ್ರಾಸ್ ಸ್ಟಾಪ್‌ನಲ್ಲಿ ಸಿಟಿ ಬಸ್ಸೊಂದನ್ನು ಹತ್ತಿದೆ. ಸೂಪರ್ ಮಾರ್ಕೆಟ್ ಕಡೆಯಿಂದ ಬಂದಿದ್ದ ಆ ಬಸ್ಸನ್ನು ಹತ್ತಿದೊಡನೆ ಟಿಕೆಟ್ ಖರೀದಿಸಿ, ಪರ್ಸನ್ನು ಯಥಾಪ್ರಕಾರ ಪ್ಯಾಂಟಿನ ಹಿಂಬದಿ ಜೇಬಿನಲ್ಲಿ ತುರುಕಿಸಿಕೊಂಡೆ. ರಶ್ ಇದ್ದುದರಿಂದ ಇಳಿಯುವವರೆಗೂ ನಿಂತುಕೊಂಡೇ ಪ್ರಯಾಣಿಸಬೇಕಾಯಿತು. ಬಸ್ಸಿನಿಂದ ಇಳಿದೊಡನೆ ಹಿಂಬದಿಯ ಜೇಬನ್ನು ತಡಕಾಡುತ್ತೇನೆ, ಪರ್ಸೇ ಇಲ್ಲ.

ಛಕ್ಕನೆ ನನ್ನ ಮನಸ್ಸಲ್ಲಿ ನೂರು ವೋಲ್ಟಿನ ಬಲ್ಬ್ ಹೊತ್ತಿಕೊಂಡಿತು. ಅದುವರೆಗೂ ಪಿಕ್ ಪಾಕೆಟ್ ಬಗ್ಗೆ ಕೇಳಿದ್ದೇನೇ ಹೊರತು ಸ್ವತಃ ಅನುಭವಿಸಿರಲಿಲ್ಲ. ಒಂದಿಷ್ಟೂ ನನ್ನರಿವಿಗೆ ಬಾರದಂತೆ ಕೈಚಳಕ ತೋರಿಸಿಬಿಟ್ಟಿದ್ದ ಚಾಣಾಕ್ಷ. ವಾಪಸ್ ಬರಲು ಶರ್ಟ್ ಜೇಬಿನಲ್ಲಿ ಒಂದಿಷ್ಟು ಹಣ ಇದ್ದುದರಿಂದ ಅಷ್ಟೇನೂ ತಲೆಕೆಡಿಸಿಕೊಳ್ಳಲಿಲ್ಲ ಮತ್ತು ನನಗೇನೂ ಅಂಥ ಬೇಜಾರೆನಿಸಲಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ ನನ್ನ ಮುಖದ ಮೇಲೆ ಕಿರುನಗೆಯೊಂದು ಹಾದುಹೋಯಿತು. ಅದಕ್ಕೆ ಕಾರಣವೇನೆಂದು ಮುಂದೆ ನಿಮಗೇ ತಿಳಿಯಲಿದೆ.

ಮರುದಿನ ನನ್ನ ಸಹೋದ್ಯೋಗಿ ಮಿತ್ರರೊಬ್ಬರೊಡನೆ ಲೋಕಾಭಿರಾಮವಾಗಿ ಮಾತನಾಡುವಾಗ ಹಿಂದಿನ ದಿನ ಕಳ್ಳನ ಕೈ ಸೇರಿದ್ದ ನನ್ನ ಪರ್ಸಿನ ಬಗ್ಗೆ ಪ್ರಸ್ತಾಪಿಸಿದೆ. ಅವರು ಥಟ್ಟನೆ 'ತ್ಚು ತ್ಚು' ಎಂದು ಮರುಗುತ್ತಾ, 'ಪಿಕ್ ಪಾಕೆಟ್ ಮಾಡುವವರದ್ದೊಂದು ಗ್ಯಾಂಗೇ ಈ ಊರಿನಲ್ಲಿದೆ. ನನ್ನ ಫ್ರೆಂಡ್ ಒಬ್ಬರು ಪೊಲೀಸ್ ಇನ್‌ಸ್ಪೆಕ್ಟರ್ ಇದ್ದಾರೆ. ಅವರಿಗೆ ಹೇಳಿ ಆ ಪರ್ಸ್ ನಿಮ್ಮ ಕೈ ಸೇರುವಂತೆ ಮಾಡುತ್ತೇನೆ' ಎಂದರು. ನಾನು ಮುಖದ ಮೇಲೊಂದು ಕಿರುನಗೆ ಬರಿಸಿಕೊಂಡು, 'ಅದೇನೂ ಬೇಡ ಬಿಡಿ ಸರ್. ಅದರಲ್ಲಿದ್ದುದು ಬರೀ ಎರಡು ರೂಪಾಯಿ' ಎಂದು ನಾನೆಂದ ತಕ್ಷಣ ಅವರು ಗಹಗಹಿಸಿ ನಗತೊಡಗಿದರು. ಅವರೊಂದಿಗೆ ನಾನೂ ನಗತೊಡಗಿದೆ.

ಟಿಪ್ ಟಾಪ್ ಆಗಿ ಡ್ರೆಸ್ ಮಾಡಿಕೊಂಡಿದ್ದ ನನ್ನ ಜೇಬಿನಿಂದ ಪರ್ಸ್ ಎಗರಿಸಿದ್ದ ಆ ಭೂಪ ಜಾಕ್‌ಪಾಟ್ ಹೊಡೆಯಿತೆಂದು ಖುಷಿಪಟ್ಟಿರಬಹುದು? ಅವನ ಕನಸಿನ ಬಲೂನಿಗೆ ಸೂಜಿ ಚುಚ್ಚಿದಂತಾಗಿ, ಪರ್ಸ್‌ನಲ್ಲಿ ಕೇವಲ ಎರಡು ರೂಪಾಯಿಯ ನೋಟನ್ನು ಕಂಡ ಆತ ಖಂಡಿತವಾಗಿಯೂ ನನ್ನನ್ನು ಮನಸ್ಸಿಗೆ ಬಂದಂತೆ ಬೈದುಕೊಂಡಿರಬಹುದಲ್ಲವೆ?

ಈಗೊಂದು ಏಳೆಂಟು ವರ್ಷಗಳ ಹಿಂದಿನ ಘಟನೆಯಿದು. ನಾನಾಗ ಮನೆಗೆ ಸಮೀಪದಲ್ಲಿ ಸಂಜೆಯ ಪ್ರಾಕ್ಟೀಸಿಗೆಂದು ಇಟ್ಟುಕೊಂಡಿದ್ದ ಕ್ಲಿನಿಕ್ಕಿಗೆ ನನ್ನ ಬಜಾಜ್ ಸ್ಕೂಟರ್‌ನಲ್ಲೇ ಹೋಗುತ್ತಿದ್ದೆ. ಅದೊಂದು ಸಂಜೆ ಎಂದಿನಂತೆ ಕ್ಲಿನಿಕ್‌ಗೆ ಹೋಗುವಾಗ ಓದಲೆಂದು ದಿನಪತ್ರಿಕೆಯನ್ನೂ ಕೈಯಲ್ಲಿ ಹಿಡಿದುಕೊಂಡೆ. ಆ ಪತ್ರಿಕೆಯ ಜೊತೆಯಲ್ಲಿ ಅಲ್ಲೇ ಟೀಪಾಯಿ ಮೇಲಿಟ್ಟಿದ್ದ ಪರ್ಸನ್ನೂ ಎತ್ತಿಕೊಂಡೆ. ಅವೆರಡನ್ನೂ ಸ್ಕೂಟರ್ ಡಿಕ್ಕಿಯೊಳಗೆ ತೂರಿಸಿ ಲಾಕ್ ಮಾಡಿ ಕ್ಲಿನಿಕ್‌ಗೆ ಹೋದೆ. ಸ್ಕೂಟರ್ ನಿಲ್ಲಿಸಿ, ವೃತ್ತಪತ್ರಿಕೆಯನ್ನೆತ್ತಿಕೊಂಡು ಹೋಗಿ ಕ್ಲಿನಿಕ್‌ನಲ್ಲಿ ಕುಳಿತುಕೊಂಡೆ. ಕ್ಲಿನಿಕ್‌ನಲ್ಲಿ ನಾನು ಪರ್ಸ್ ಬಳಸುವುದು ಅಪರೂಪವಾದುದರಿಂದ, ಡಿಕ್ಕಿಯೊಳಗೆ ಹಾಕಿದ್ದ ಪರ್ಸನ್ನು ಮರೆತೇಬಿಟ್ಟು ಪೇಪರ್ ಓದುತ್ತಾ ಕುಳಿತುಬಿಟ್ಟೆ.

ಮರುದಿನ ಎಂದಿನಂತೆ ಎದ್ದು ಮನೆಯ ಕಾಂಪೌಂಡ್ ಗೇಟಿನ ಬೀಗ ತೆಗೆಯಲು ಅಣಿಯಾಗುತ್ತಿದ್ದಂತೆ, ಸರಳುಗಳಿಗೆ ಸಿಕ್ಕಿಸಿದ್ದ ರಬ್ಬರ್ ಬ್ಯಾಂಡ್ ಒಂದರಲ್ಲಿ ಬಿಗಿಯಲಾಗಿದ್ದ ನ್ಯೂಸ್ ಪೇಪರ್‌ನ ತುಣುಕೊಂದು ಕಣ್ಣಿಗೆ ಬಿದ್ದಿತು. ರಬ್ಬರ್ ಬ್ಯಾಂಡ್ ಕಳಚಿ ನೋಡುತ್ತೇನೆ. ಏನಾಶ್ಚರ್ಯ! ನಿನ್ನೆ ಸ್ಕೂಟರ್‌ನಲ್ಲಿ ತುರುಕಿದ್ದ ನನ್ನ ಪರ್ಸ್ ಅಲ್ಲಿದೆ. ಜೊತೆಯಲ್ಲಿ ಬಿಳಿ ಹಾಳೆಯ ತುಣುಕೊಂದರಲ್ಲಿ, 'ಈ ಪರ್ಸ್ ನಿನ್ನೆ ಸಂಜೆ ಕ್ಲಿನಿಕ್ ಮುಂದೆ ಸಿಕ್ಕಿತು' ಎಂದು ವಕ್ರವಕ್ರವಾಗಿ ಬರೆದಿದ್ದ ಅಕ್ಷರಗಳು. ಛಕ್ಕನೆ ಟ್ಯೂಬ್ ಲೈಟ್ ಹೊತ್ತಿದಂತೆ ಸ್ಕೂಟರ್‌ನ ಡಿಕ್ಕಿಯಿಂದ ನ್ಯೂಸ್ ಪೇಪರ್ ಅನ್ನು ಎತ್ತಿಕೊಳ್ಳುವಾಗ ಅದರ ಜೊತೆಗಿದ್ದ ಪರ್ಸನ್ನು ಬೀಳಿಸಿಕೊಂಡಿರುವ ಸಂಗತಿ ನನ್ನ ಮಂಕು ತಲೆಗೆ ಹೊಳೆದುಬಿಟ್ಟಿತು.

ಯಾರೋ ಪುಣ್ಯಾತ್ಮ ಅದನ್ನು ಮನೆಯವರೆಗೆ ತಂದು ಒಪ್ಪಿಸಿದ್ದಾನೆಂದು ಮನಸ್ಸಿನಲ್ಲೇ ಅವನಿಗೆ ವಂದಿಸುತ್ತಾ ಮೆಲ್ಲಗೆ ಪರ್ಸ್ ತೆರೆದೆ. ಅದರಲ್ಲಿದ್ದ ಎರಡು ಸಾವಿರ ರೂಪಾಯಿಗಳು ಗಾಯಬ್. ಅಬ್ಬಾ ಅದೆಂಥ ಪ್ರಾಮಾಣಿಕ ಅಲ್ಲವೆ ಈ ಪರ್ಸ್ ತಂದಿಟ್ಟುಹೋದ ವ್ಯಕ್ತಿ? ಹಣವನ್ನು ಎತ್ತಿಟ್ಟುಕೊಂಡು ಅದರಲ್ಲಿದ್ದ ಪ್ಯಾನ್ ಕಾರ್ಡ್ ಮತ್ತು ಆಧಾರ್ ಕಾರ್ಡ್‌ಗಾಗಿ ನಾನು ಪರದಾಡಬಾರದೆಂದು ಮನೆಯ ತನಕ ಬಂದು ಪರ್ಸ್ ಇಟ್ಟು ಹೋಗಿದ್ದಾನೆ! ಯಾರೋ ಪರಿಚಿತ ವ್ಯಕ್ತಿಯೇ ಆಗಿರಬೇಕು. ಆದರೆ ಯಾರ ಮೇಲೆ ಸಂದೇಹ ಪಡುವುದು?



ಹತ್ತು ವರ್ಷಗಳ ಹಿಂದಿನ ಮಾತು. ಅವತ್ತು ಡ್ಯೂಟಿಯಿಂದ ಮನೆಗೆ ಹಿಂತಿರುಗಿಬಂದು ಪ್ಯಾಂಟ್ ಜೇಬು ತಡಕಾಡುತ್ತೇನೆ. ಪರ್ಸೇ ಇಲ್ಲ. ಇಂಗು ತಿಂದ ಮಂಗನಂತೆ ಮುಖ ಮಾಡಿಕೊಂಡ ನಾನು, ಮರುದಿನ ಸಾಮಾನ್ಯವಾಗಿ ಕುಳಿತುಕೊಳ್ಳುವ ಜಾಗಗಳಲ್ಲೆಲ್ಲಾ ಹೋಗಿ ಹುಡುಕಾಡಿದೆ. ಕ್ಯಾಂಟೀನ್‌ನಲ್ಲಿ ಕ್ಯಾಶಿಯರ್‌ನ ಬಳಿಯೂ ವಿಚಾರಿಸಿದೆ. ಎಲ್ಲಿಯೂ ಸಕಾರಾತ್ಮಕ ಫಲಿತಾಂಶ ಸಿಗದಿದ್ದುದರಿಂದ ಆ ಪರ್ಸನ್ನೂ, ಕಳೆದುಕೊಂಡಿದ್ದ ಮೊತ್ತವನ್ನೂ ಅಂದೇ ಮರೆತುಬಿಟ್ಟು ನಿರಾಳನಾದೆ. ಆದರೆ ಅದರಲ್ಲಿಟ್ಟಿದ್ದ ಪ್ಯಾನ್ ಕಾರ್ಡ್ ಅತ್ಯವಶ್ಯ ದಾಖಲೆಯಾಗಿದ್ದರಿಂದ ಡ್ಯೂಪ್ಲಿಕೇಟ್‌ಗೆ ಅಪ್ಲೈ ಮಾಡಿ ತರಿಸಿಕೊಂಡೆ.

ಅದೊಂದು ದಿನ ನಮ್ಮ ಸೆಮಿನಾರ್ ಹಾಲ್‌ನಲ್ಲಿದ್ದ ಪುಟ್ಟ ಮಂಚವೊಂದನ್ನು ನನ್ನ ಚೇಂಬರ್‌ಗೆ ಸ್ಥಳಾಂತರಿಸುವ ಕೆಲಸವನ್ನು ಕೆಲ ನೌಕರರಿಗೆ ವಹಿಸಿದ್ದೆ. ಎತ್ತಿಡುವ ಮೊದಲು ಸ್ವಚ್ಛಗೊಳಿಸಲೆಂದು ಆಯಾ ಒಬ್ಬರು ಅದರ ಮೇಲಿದ್ದ ರೆಕ್ಸಿನ್ ಮ್ಯಾಟ್ರೆಸ್ ಮೇಲಕ್ಕೆತ್ತಿದರು ಅಷ್ಟೆ. ಏನಾಶ್ಚರ್ಯ! ಸುಮಾರು ಒಂದು ವರ್ಷದ ಹಿಂದೆ ಕಳೆದುಹೋಗಿದೆ ಎಂದುಕೊಂಡಿದ್ದ ನನ್ನ ಪರ್ಸ್ ಅನಾಥವಾಗಿ ಅಲ್ಲಿ ಬಿದ್ದುಕೊಂಡಿರಬೇಕೆ! ಖುಷಿಯಲ್ಲಿ ನನಗೆ ತೇಲಾಡುವಂತಾಗಿ ಆ ಪರ್ಸನ್ನು ಎತ್ತಿಕೊಂಡು ತಡಕಾಡುತ್ತೇನೆ. ಅದರಲ್ಲಿದ್ದ ಹಣವೆಲ್ಲಾ ಮಂಗಮಾಯ. ಆದರೆ ಪ್ಯಾನ್ ಕಾರ್ಡ್ ಮತ್ತು ವಿಸಿಟಿಂಗ್ ಕಾರ್ಡುಗಳು ಮಾತ್ರ ಅದರಲ್ಲಿದ್ದವು. ಏನು ನಡೆದಿರಬಹುದೆಂದು ನನ್ನ ಮಂಕು ತಲೆಗೆ ಹೊಳೆದುಬಿಟ್ಟಿತು. ಆ ದಿನ ಸೆಮಿನಾರ್ ಕೇಳುವುದರಲ್ಲಿ ತಲ್ಲೀನನಾಗಿ ಕುಳಿತಿದ್ದಾಗ, ಪ್ಯಾಂಟ್ ಜೇಬಿನಿಂದ ಪರ್ಸು ಜಾರಿ ಕೆಳಗೆ ಬಿದ್ದುಬಿಟ್ಟಿದೆ.

ಮರುದಿನ ಆ ಹಾಲ್‌ನ ಕಸ ಗುಡಿಸಿದವರಾರೋ ಅದರಲ್ಲಿರುವ ಹಣವನ್ನು ಜೇಬಿಗಿಳಿಸಿ, ಪರ್ಸನ್ನು ಮಾತ್ರ ಮ್ಯಾಟ್ರೆಸ್ ಕೆಳಗೆ ಇಟ್ಟುಬಿಟ್ಟಿದ್ದಾರೆ. ಎಂಥ ಚಾಲಾಕಿತನ!

ಪರ್ಸ್, ವ್ಯಾಲೆಟ್... ಹೀಗೆ ಬೇರೆ ಬೇರೆ ಹೆಸರಿನಿಂದ ಕರೆಸಿಕೊಳ್ಳುವ ಈ ಮಾಯಾಂಗನೆ ಕಂಡವರಿಗೆಲ್ಲಾ ಮೋಡಿ ಮಾಡಿ ಕೈ ಬೀಸಿ ಕರೆಯುವ ಗುಣವುಳ್ಳವಳು. ಇಂಥವಳ ಸಹವಾಸದಲ್ಲಿ ಸಾಕಷ್ಟು ಕಹಿ ಅನುಭವಗಳಾದ ನಂತರ, ಸದ್ಯಕ್ಕೆ ಇವಳ ಸಹವಾಸವೇ ಬೇಡವೆಂದು ನಿರ್ಧರಿಸಿದ್ದೇನೆ. ನಿತ್ಯದ ಅಗತ್ಯಗಳಿಗೆ ಸಾಕಾಗುವಷ್ಟು ಹಣವನ್ನು ಅಂಗಿಯ ಜೇಬಿಗಿಳಿಸಿಕೊಂಡು ಹೊರಹೋಗುವುದನ್ನು ರೂಢಿಸಿಕೊಂಡಿದ್ದೇನೆ.

ಪ್ರತಿಕ್ರಿಯಿಸಿ: **feedback@sudha.co.in**